ಶ್ರೀ ಗೋವಿಂದ ಎಂ.ಕಾರಜೋಳ : ಅಧ್ಯಕ್ಷರೆ, ಬಿಜೆಪಿಯವರ ಬಗ್ಗೆ ಮಾತನಾಡಿರುವ ಪದವನ್ನು ದಾಖಲೆಯಿಂದ ತೆಗೆಸಿ.

(ಗೊಂದಲ)

ಶ್ರೀ.ಸಿ.ಟಿ.ರವಿ : ದತ್ತಾರವರು ಬಿಜೆಪಿಯವರ ಬಗ್ಗೆ ಯಾವಾಗಲೂ ಹೀಗೆ ಮಾತನಾಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : Highest law making body is parliament. ದತ್ತಾರವರು ಶ್ರೀಲಂಕಾಕ್ಕೆ ಹೋಗದಿರುವುದರಿಂದ ಈ ರೀತಿ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಎಂಬ ಪದವನ್ನು ಕಡತದಿಂದ ತೆಗೆಯಲಾಗಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೈ.ಎಸ್.ವಿ.ದತ್ತಾರವರು ಎಂದು ಹೇಳಿದ ಪದವನ್ನು ಮಾನ್ಯ ಸಭಾಧ್ಯಕ್ಷರು ಕಡತದಿಂದ ತೆಗೆದುಹಾಕುವಂತೆ ಸೂಚಿಸಿದರು)

ಅಧ್ಯಕ್ಷರು : ಮುಂದಿನ ಪ್ರಶ್ನೆ ವಿಶ್ವೇಶ್ವರ ಹೆಗಡೆ ಕಾಗೇರಿ ಕೇಳಿ

ಪ್ರಕೃತಿ ವಿಕೋಪ ಪರಿಹಾರ ನಿಧಿ

05(61) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ (ಅತಿವೃಷ್ಟಿ) ಬಿಡುಗಡೆ ಮಾಡಿದ್ದ ಮೊತ್ತವೆಷ್ಟು ; (ಜಿಲ್ಲಾವಾರು ಬಿಡುಗಡೆ ಮಾಡಿದ ವಿವರ ನೀಡುವುದು)

(ಆ) ಕಳೆದ ವರ್ಷ ಇದಕ್ಕಾಗಿ ನಿಗದಿಪಡಿಸಿದ್ದ ಹಣವೆಷ್ಟು; ಮಂಜೂರಾದ ಹಣವೆಷ್ಟು; ಈ ಪೈಕಿ ಬಳಕೆಯಾಗಿರುವ ಮೊತ್ತವೆಷ್ಟು ;

(ಇ) ಹಿಂದಿನ ಅವಧಿಯ ಮೊತ್ತವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಅಂತಹ ಜಿಲ್ಲೆಗಳಾವುವು; ಬಳಕೆ ಮಾಡಿಕೊಂಡ ಜಿಲ್ಲೆಗಳ ಪೈಕಿ ಇದುವರೆಗೂ ಉಪಯೋಗ ಪ್ರಮಾಣ ಪತ್ರ ನೀಡದಿರುವ ಜಿಲ್ಲೆಗಳೆಷ್ಟು ; ಅವು ಯಾವುವು ;

(ಉ) ಸರ್ಕಾರ ನೀಡಿರುವ ಮೊತ್ತಕ್ಕೂ, ಬಳಕೆ ಮಾಡಿಕೊಂಡಿರುವ ಪ್ರಮಾಣಪತ್ರದ ಮೊತ್ತಕ್ಕೂ ವ್ಯತ್ಯಾಸಗಳಿರುವುದು ಕಂಡು ಬಂದಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

(ಊ) ಇದುವರೆಗಿನ ಈ ನಿಧಿಯ ಬಳಕೆಯ ಪ್ರಗತಿ ಏನು ? (ಜಿಲ್ಲಾವಾರು ಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):–

(ಅ) 2013–14ನೇ ಸಾಲಿನಲ್ಲಿ ಅತಿವೃಷ್ಟಿ ಪರಿಹಾರ ಕಾರ್ಯಗಳಿಗಾಗಿ ಜಿಲ್ಲಾಧಿಕಾರಿಗಳಿಗೆ ರೂ.232.16 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ.

(ಆ) ಅತಿವೃಷ್ಟಿಗಾಗಿ ಪ್ರತ್ಯೇಕವಾಗಿ ಅನುದಾನ ನಿಗದಿಪಡಿಸಿರುವುದಿಲ್ಲ ರಾಜ್ಯ ವಿಪತ್ತು ಪರಿಹಾರ ನಿಧಿ(ಎಸ್‌ಡಿಆರ್‌ಎಫ್) ರಾಜ್ಯ ಬಜೆಟ್‌ನಲ್ಲಿ ರೂ.53.88ಕೋಟಿ ನಿಗಧಿಯಾಗಿರುತ್ತದೆ. ಇದರಲ್ಲಿ ಅತಿವೃಷ್ಟಿಗಾಗಿ ರೂ.232.16 ಕೋಟಿ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. (ಹೆಚ್ಚುವರಿ ಅನುದಾನವನ್ನು ರಾಜ್ಯ/ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ.)

(ಇ) ಹಿಂದಿನ ಅವಧಿಯಲ್ಲಿ (2012–13) ರಾಜ್ಯ/ಕೇಂದ್ರದಿಂದ ಬಿಡುಗಡೆಯಾದ ಅನುದಾನವನ್ನು ಪೂರ್ತಿ ಬಳಕೆ ಮಾಡಿಕೊಳ್ಳಲಾಗಿದೆ.

(ಈ) ಎಲ್ಲಾ ಜಿಲ್ಲೆಗಳು ಅನುದಾನ ಮಾಡಿಕೊಂಡಿವೆ ಆದರೆ ಕೆಳಕಂಡ ಜಿಲ್ಲೆಗಳು ಉಪಯೋಗಿತ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಅವುಗಳೆಂದರೆ 1) ಬಿಜಾಪುರ, 2) ತುಮಕೂರು 3) ಬಳ್ಳಾರಿ 4)ಬಾಗಲಕೋಟೆ 5)ಹಾವೇರಿ 6)ಧಾರವಾಡ 7)ಚಿಕ್ಕಮಗಳೂರು 8)ಚಿತ್ರದುರ್ಗ 9)ಹಾಸನ 10)ದಾವಣಗೆರೆ 11)ಮೈಸೂರು 12)ಗದಗ 13)ಕಲಬುರಗಿ 14)ಬೆಂಗಳೂರು ನಗರ 15)ಕೊಪ್ಪಳ 16)ಉತ್ತರ ಕನ್ನಡ 17)ಬೆಂಗಳೂರು ಗ್ರಾ ಮತ್ತು 18)ಶಿವಮೊಗ್ಗ ಮತ್ತು 19)ಬೆಳಗಾವಿ

(ಉ) ಸರ್ಕಾರ ಬಿಡುಗಡೆ ಮಾಡಿದ ಮೊತ್ತಕ್ಕೂ ಜಿಲ್ಲಾಧಿಕಾರಿಗಳು ಸಲ್ಲಿಸಿರುವ ಬಳಕೆ ಪ್ರಮಾಣದ ಪತ್ರಕ್ಕೂ ವ್ಯತ್ಯಾಸವಿದೆ. ಕಾರಣ ಹಲವಾರು ಕಾಮಗಾರಿಗಳು ಪ್ರಗತಿಯಲ್ಲಿರುವುದು. ಮುಕ್ತಾಯಗೊಂಡಿರುವ ಬಗ್ಗೆ ವರದಿ ಬಂದಿರುವುದಿಲ್ಲ. ಇನ್ನೂ ಕೆಲವು ಕಾಮಗಾರಿಗಳು ಮುಕ್ತಾಯಗೊಂಡಿದ್ದು ಆದರೆ, ಮುಕ್ತಾಯ ಪ್ರಮಾಣ ಪತ್ರದ ಬಗ್ಗೆ ದೃಢೀಕರಣ ಬರದೇ ಇರುವುದರಿಂದ, ಕೊನೆಯ ಕಂತಿನ ಹಣ ಬಿಡುಗಡೆಯಾಗಿರುವುದಿಲ್ಲ.

(ಊ) ಅತೀವೃಷ್ಟಿ ಪರಿಹಾರಕ್ಕಾಗಿ ಬಿಡುಗಡೆ ಮಾಡಿದ ಅನುದಾನವನ್ನು ಎಲ್ಲಾ ಜಿಲ್ಲೆಗಳು ಬಳಕೆ ಮಾಡಿಕೊಂಡಿದ್ದು 1.ಕೋಲಾರ 2.ಕೊಡಗು 3.ಚಾಮರಾಜನಗರ 4.ರಾಯಚೂರು 5.ಉಡುಪಿ 6.ಮಂಡ್ಯ 7.ಚಿಕ್ಕಬಳ್ಳಾಪುರ 8.ಬೀದರ್ 9.ದಕ್ಷಿಣ ಕನ್ನಡ 10.ಯಾದಗಿರಿ 11.ರಾಮನಗರ ಜಿಲ್ಲೆಗಳು ಹಣ ಬಳಕೆ ಪತ್ರ ಸಲ್ಲಿಸಿರುತ್ತವೆ. ಉಳಿದ ಜಿಲ್ಲೆಗಳಿಗೆ ತುರ್ತಾಗಿ ಉಳಿಕೆಯಿರುವ ಅನುದಾನವನ್ನು ಎಸ್‌ಡಿಆರ್‌ಎಫ್ ಮಾರ್ಗಸೂಚಿಯ ಪ್ರಕಾರ ವೆಚ್ಚ ಮಾಡಿ ಹಣ ಬಳಕೆ ಪತ್ರ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿದೆ.

ANNEXURE

	District	Flood	Input Subsidy (FLOOD)	Total (Rs.in Lakhs)
1	Bangalore Urban	710.00		710.00
2	Bangalore Rural	210.00		210.00
3	Bagalkote	820.00		820.00
4	Belgaum	1020.00		1020.00
5	Bellary	336.00		336.00
6	Bijapur	810.00		810.00
7	Bidar	510.00		510.00
8	Chamarajanagar	260.00		260.00
9	Chickmagalur	720.00	1770.00	2490.00
10	Chitradurga	320.00		320.00
11	Chikkaballapur	220.00		220.00
12	Dakshina Kannada	710.00	2500.00	3210.00
13	Davanagere	470.00	150.00	620.00
14	Dharwad	210.00		210.00
15	Gadag	310.00		310.00
16	Gulbarga	420.00		420.00
17	Hassan	520.00		520.00
18	Haveri	320.00		320.00
19	Kodagu	810.00	430.00	1240.00
20	Koppal	310.00		310.00
21	Kolar	310.00		310.00
22	Mandya	320.00		320.00
23	Mysore	320.00		320.00
24	Raichur	460.00		460.00
25	Ramanagar	260.00		260.00
26	Shimoga	770.00	2300.00	3070.00
27	Tumkur	220.00		220.00
28	Udupi	660.00	650.00	1310.00
29	Uttar Kannada	1520.00	300.00	1820.00
30	Yadagiri	260.00		260.00
	Total	15116.00	8100.00	23216.00

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈ ಆರ್ಥಿಕ ವರ್ಷ ಏಪ್ರಿಲ್, ಮೇ, ಜೂನ್ ಬಗ್ಗೆ ಮಾಹಿತಿ ಕೇಳುತ್ತಿದ್ದೇನೆ. ನಾನು ಹಿಂದಿನ ವರ್ಷದ ಅತಿವೃಷ್ಟಿಯ ಬಗ್ಗೆ ಕೇಳಿಲ್ಲ, ಕೇಳುವುದಿಲ್ಲ. ಈ ಆರ್ಥಿಕ ವರ್ಷದ ಏಪ್ರಿಲ್, ಮೇ, ಜೂನ್‌ನಲ್ಲಿ ರಾಜ್ಯದ ಸುಮಾರು 20–25 ಜಿಲ್ಲೆಗಳಲ್ಲಿ ಗುಡುಗು ಸಿಡಿಲು ಸಹಿತ ಆಲಿಕಲ್ಲು ಮಳೆಯಿಂದಾಗಿ ಸುಮಾರು 20–25 ಜನರು ಸತ್ತುಹೋಗಿದ್ದಾರೆ. ರೈತರ ಬೆಳೆಯಂತೂ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಬಾಳೆ, ದ್ರಾಕ್ಷಿ, ಪಪ್ಪಾಯಿ, ಎಳ್ಳು, ತೆಂಗು ಅಡಿಕೆ. . . .

ಅಧ್ಯಕ್ಷರು : ಇವೆಲ್ಲಾ ಇವತ್ತಿರುವ ಕೃಷಿ ಬೇಡಿಕೆಯ ಮೇಲೆ ಚರ್ಚೆ ಮಾಡುವಾಗ ಮಾತನಾಡಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಲ್ಲ, ಅತಿವೃಷ್ಟಿಯ ಪರಿಹಾರದ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್(ಮಾನ್ಯ ಕಂದಾಯ ಸಚಿವರು) : ಅಧ್ಯಕ್ಷರೆ, ಇವರು main question ಏನು ಕೇಳಿದ್ದಾರೆ ಅದನ್ನು ಕೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅತಿವೃಷ್ಟಿ ಪರಿಹಾರಕ್ಕೆ ಹಣ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : Your supplementary question should be related to main question. ಬೇರೆ ಪ್ರಶ್ನೆ ಕೇಳಬೇಡಿ. ಅದಕ್ಕೆ ಬೇರೆ ರೀತಿ ಅವಕಾಶ ಕೊಡೋಣ. I request you to give Fresh notice.ಈಗ ಮೂಲ ಪ್ರಶ್ನೆಯನ್ನು ನೀವು ಕೇಳಿರುವಿರಾ ಎಂಬುದನ್ನು ನೋಡಿಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದಕ್ಕೆ ಹಣ ಎಷ್ಟು ಬಿಡುಗಡೆ ಮಾಡಿರುವಿರಿ ಎಂದು ಕೇಳಿದ್ದೇನೆ. ಇವರು ಕಳೆದ ವರ್ಷದಲ್ಲಿ ಹಣ ಬಿಡುಗಡೆ ಮಾಡಿರುವ ಬಗ್ಗೆ ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಆರ್ಥಿಕ ವರ್ಷದಲ್ಲಿ ಅತಿವೃಷ್ಟಿಗೆ ಪರಿಹಾರಧನ ಎಷ್ಟು ಬಿಡುಗಡೆ ಮಾಡಿರುವಿರಿ ?

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಅದೆಲ್ಲಾ ಆಲಿಕಲ್ಲು ಮಳೆಗೆ ಸಂಬಂಧಪಟ್ಟಿದ್ದು, ಇದರ ಬಗ್ಗೆ ಮಾತನಾಡಿ.

ಅಧ್ಯಕ್ಷರು : ಹೆಗಡೆಯವರು ನೀವು ಕೇಳಿದ ಪ್ರಶ್ನೆಗೆ ಉತ್ತರ ಇಲ್ಲೇ ಇದೆ, ರಾಜ್ಯ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ (ಅತಿವೃಷ್ಟಿ) ಬಿಡುಗಡೆ ಮಾಡಿದ್ದ ಮೊತ್ತವೆಷ್ಟು ; (ಜಿಲ್ಲಾವಾರು ಬಿಡುಗಡೆ ಮಾಡಿದ ವಿವರ ನೀಡುವುದು) ಎಂದು ಕೇಳಿದ್ದೀರಿ? ಯಾವ ವರ್ಷವೆಂದು ಕೇಳಿರುವಿರಾ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ವರ್ಷದ ಬಗ್ಗೆ ಮಾಹಿತಿ ಕೊಡಿ ಎಂದು ನಾನು ನಿಂತುಕೊಂಡು ಕೇಳುತ್ತಿದ್ದೇನೆ. ಕಳೆದ ವರ್ಷದ್ದು ಕೇಳುತ್ತಿಲ್ಲ. ನಾನು ಅತಿವೃಷ್ಟಿ ಪರಿಹಾರಕ್ಕೆ ಹಣ ಎಷ್ಟು ಬಿಡುಗಡೆಯಾಗಿದೆ ಎಂದು ಕೇಳಿರುವುದು ವಾಸ್ತವಿಕವಾಗಿ ಅದು ಈ ವರ್ಷದ್ದೇ ಅದು. ಅಂದರೆ ಅದು ನಮ್ಮ ತಿಳುವಳಿಕೆಯಲ್ಲಿರುವುದು, ನಾನು ಇನ್ನು ಸ್ಪಷ್ಟವಾಗಿ ಕೇಳಬೇಕೆಂದರೆ ಮುಂದಿನ ಸಲ ಕೇಳುತ್ತೇನೆ. ಪ್ರತಿಯೊಂದು ಶಬ್ದವನ್ನು ಬಿಡಿಸಿ ಬಿಡಿಸಿ ಕೇಳೋಣ. ಈ ಆರ್ಥಿಕ ವರ್ಷದ ಮಾರ್ಚ್–ಏಪ್ರಿಲ್‌ನಲ್ಲಿ ಅವರು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಲಿ. ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ರೈತರು ದೊಡ್ಡ ಹಾನಿಗೊಳ್ಳಗಾಗಿದ್ದಾರೆ. ತಾವು ಈ ವರ್ಷ ಬಿಡುಗಡೆ ಮಾಡಿರುವ ಹಣದ ಜೊತೆಯಲ್ಲಿ... ಕೇಂದ್ರ ಸರ್ಕಾರ ನಿಗದಿ ಮಾಡಿರುವ ಹಣಕ್ಕಿಂತ ನಾಲ್ಕು ಪಟ್ಟು ಹಣವನ್ನು ನಾವು ಕೊಡುತ್ತೇವೆಂದು ನೀವೇ ಹೇಳಿದ್ದೀರಿ. ಹಾಗಿದ್ದಲ್ಲಿ ರೈತರಿಗೆ ಪರಿಹಾರವಾಗಿ ಎಷ್ಟು ಹಣವನ್ನು ನಾವು ಕೊಟ್ಟಿದ್ದೀರಿ ಎಂದು ದಯವಿಟ್ಟು ಹೇಳಿ. ನಾನು ಉಪ ಪ್ರಶ್ನೆಯಲ್ಲಿ ಇದನ್ನು ಕೇಳುತ್ತಿರುವಂಥದ್ದು, ಇನ್ನೂ ನಾನು ಇದೇ ಪ್ರಶ್ನೆಗೆ ಸಂಬಂಧಪಟ್ಟಂತೆ ಕೇಳುವುದಾದರೆ, ಇನ್ನೂ ಸುಮಾರು 19 ಜಿಲ್ಲೆಯ ಜಿಲ್ಲಾಧಿಕಾರಿಗಳು Utilization Certificate ಕಳುಹಿಸಿಲ್ಲ. ಅದು ಉತ್ತರದಲ್ಲಿ ಇದೆ.

ಅಧ್ಯಕ್ಷರು : ಅದು, ಬೇಡ. ನಿಮಗೆ ಯಾವ ವಿಷಯಕ್ಕೆ ಉತ್ತರ ಬೇಕು ಅದನ್ನು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಅವರು UC ಕಳುಹಿಸದೇ ಇರುವುದರಿಂದ part payment ಆಗಿದೆ. ಇನ್ನೂ ಅಲ್ಲಿ ಪೂರ್ಣ ಹಣ ಬಿಡುಗಡೆಯಾಗಿಲ್ಲ. ಎರಡನೆಯದಾಗಿ ರೈತರಿಗೆ 400 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಈ ಮೂರು ತಿಂಗಳಿಗೆ ಸಂಬಂಧಪಟ್ಟಂತೆ ನಾನು ಹೇಳುತ್ತಿರುವುದು. ಜಾನುವಾರಗಳ ನಷ್ಟಕ್ಕೆ ಇನ್ನೂ ಹಣ ಬಿಡುಗಡೆ ಆಗಲಿಲ್ಲ.

ಅಧ್ಯಕ್ಷರು : ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ? ಈ ವರ್ಷ 2014–15ನೇ ಸಾಲಿನಲ್ಲಿ ಎಷ್ಟು ನಷ್ಟವಾಗಿದೆ ಎಂದು ಕೇಳಿ.

ಶ್ರೀ ಗೋವಿಂದ ಎಂ.ಕಾರಜೋಳ : ದ್ರಾಕ್ಷಿ, ದಾಳಿಂಬೆ ಮತ್ತು ಉಳಿದ ಬೆಳೆ ಹಾನಿಯಾಗಿರುವ ಬಗ್ಗೆ.. ಅದಕ್ಕೆ ಸಂಬಂಧಪಟ್ಟಂತೆ ಇದೆ.

ಅಧ್ಯಕ್ಷರು : ಪ್ರಶ್ನೆಯನ್ನು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಕಂದಾಯ ಸಚಿವರಾದ ಶ್ರೀನಿವಾಸ್ ಪ್ರಸಾದ್‌ರವರು ಈ ವರ್ಷ ಏಪ್ರಿಲ್, ಮೇ, ಜೂನ್‌ನಲ್ಲಿ ಅತಿವೃಷ್ಟಿಗೋಸ್ಕರ ಎಷ್ಟು ಹಣವನ್ನು ಬಿಡುಗಡೆ ಮಾಡಿರುವಿರಿ ? ಕೇಂದ್ರ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ನಾಲ್ಕು ಪಟ್ಟು ಪರಿಹಾರವನ್ನು ನೀವು ಕೊಡುತ್ತೇವೆಂದು

ಹೇಳಿದ್ದೀರಿ. ಆಲಿಕಲ್ಲು ಮಳೆಗೆ ಸಂಬಂಧಪಟ್ಟಂತೆ ನಾನು ಕೇಳುತ್ತಿರುವುದು, ಏಪ್ರಿಲ್, ಮೇ, ಜೂನ್‌ನಲ್ಲಿ ಇನ್ನೇನು ಆಗಿದೆ? ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ಏಪ್ರಿಲ್, ಮೇ, ಜೂನ್‌ನಲ್ಲಿ ಗುಡುಗು ಸಹಿತ ಆಲಿಕಲ್ಲು ಮಳೆ ಏನಾಗಿದೆ ಅದಕ್ಕೆ ಏಪ್ರಿಲ್, ಮೇ, ಜೂನ್‌ನಲ್ಲಿ ಅತಿವೃಷ್ಟಿ ಎಂದೇ ಪರಿಗಣಿಸಲಾಗುತ್ತದೆ. ಅದಕ್ಕೆ ಹಣ ಎಷ್ಟು ಬಿಡುಗಡೆ ಮಾಡಿದ್ದಾರೆಂಬುದು ತಿಳಿಸಿ. ಎರಡನೆಯದಾಗಿ ಕೇಂದ್ರ ಸರ್ಕಾರ ನಿಗದಿ ಮಾಡಿರುವುದಕ್ಕಿಂತ ನಾಲ್ಕು ಪಟ್ಟು ಪರಿಹಾರಧನವನ್ನು ರೈತರಿಗೆ ಕೊಡುತ್ತೇವೆಂದು ಕಂದಾಯ ಸಚಿವರೇ ಹೇಳಿದ್ದರು. ಅದು ಏನಾಯಿತು ಎಂದು ಕೇಳುತ್ತಿದ್ದೇನೆ. ಮೂರನೆಯದಾಗಿ 19 ಜಿಲ್ಲೆಯ ಜಿಲ್ಲಾಧಿಕಾರಿಗಳು UC ತೆಗೆದುಕೊಂಡಿಲ್ಲ. ಆ UC ಯಾವಾಗ ಕೊಡಿಸುವಿರಿ ? ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡುವಿರಿ ?

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಆಲಿಕಲ್ಲು ಮಳೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ.

ಅಧ್ಯಕ್ಷರು : ಆಲಿಕಲ್ಲು ಮಳೆ ಎಂದು ಅವರು ಹೇಳಲಿಲ್ಲ, ಅತಿವೃಷ್ಟಿ ಎಂದು ಕೇಳಿದ್ದಾರೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಈಗ ಅವರಿಗೆ ಯಾವುದಕ್ಕೆ ಉತ್ತರ ಬೇಕಾಗಿದೆ ತಿಳಿಸಿ. ಈಗ ಆಲಿಕಲ್ಲು ಮಳೆ ಬಗ್ಗೆ ಪ್ರಸ್ತಾಪ ಮಾಡಿದಿರಿ, ಆಲಿಕಲ್ಲು ಮಳೆ ಬಗ್ಗೆ ಕೂಡ ನಾವು ಅತಿವೃಷ್ಟಿ, ಅನಾವೃಷ್ಟಿ...

ಶ್ರೀ ಜಗದೀಶ್ ಶೆಟ್ಟರ್ : ಅತಿವೃಷ್ಟಿಯಲ್ಲಿ ಆಲಿಕಲ್ಲು ಮಳೆ ಕೂಡ ಬರುತ್ತದೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಒಂದು ನಿಮಿಷ ಶೆಟ್ಟರ್‌ರವರೇ, ನೀವು ಸೀನಿಯರ್ ಇದ್ದೀರಿ, ನೀವೂ ಪ್ರಶ್ನೆ ಕೇಳಿ. ಅವರು ಮುಖ್ಯ ಪ್ರಶ್ನೆಗೆ ಉತ್ತರ ಕೊಟ್ಟ ಮೇಲೆ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಆಗ ನೀವು ಪ್ರಶ್ನೆಯನ್ನು ಕೇಳಿ, ಬೇಡವೆನ್ನುವುದಿಲ್ಲ. ಅವರು ಇಲ್ಲಿ ಅತಿವೃಷ್ಟಿಯ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಅತಿವೃಷ್ಟಿಯನ್ನು ಬಿಟ್ಟು ಆಲಿಕಲ್ಲು ಮಳೆಯನ್ನು ತೆಗೆದುಕೊಂಡಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಅತಿವೃಷ್ಟಿ, ಅನಾವೃಷ್ಟಿ, ಆಲಿಕಲ್ಲು ಮಳೆ ಮೂರನ್ನು ಕೂಡ ವ್ಯವಸ್ಥಿತವಾಗಿ ಏನು ಪರಿಹಾರ ಮಾಡಬೇಕೆಂಬ ಬಗ್ಗೆ ಯೋಚನೆಯನ್ನು ಮಾಡಿದ್ದೇವೆ. ಈ ಮೂರು ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೂ ಕೂಡ ಮನವಿಯನ್ನು ಕೊಟ್ಟಿದ್ದೇವೆ. ಅತಿವೃಷ್ಟಿಯಲ್ಲಿಯೂ ಬಂದಿದೆ, ಅನಾವೃಷ್ಟಿಯಲ್ಲಿಯೂ ಬಂದಿದೆ, ಆಲಿಕಲ್ಲು ಮಳೆಯಲ್ಲಿಯೂ ಬಂದಿದೆ. ನಮ್ಮ ಮುಖ್ಯಮಂತ್ರಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆಲಿಕಲ್ಲು ಮಳೆಯಿಂದಾಗಿರುವ ಹಾನಿಯ ಬಗ್ಗೆ ಅವರೇ ಸ್ವತಃ ಭೇಟಿ ಕೊಟ್ಟು ಯಾವ್ಯಾವ ಜಿಲ್ಲೆಗಳಲ್ಲಿ horticulture crops ಎಲ್ಲೆಲ್ಲಿ ನಷ್ಟವಾಗಿತ್ತು ಅದನ್ನೆಲ್ಲಾ ಪರಿಶೀಲನೆ ಮಾಡಿ ಬಂದಿದ್ದಾರೆ. ಕೇಂದ್ರ ಸರ್ಕಾರದವರು ನಮಗೆ 82.00 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಹಣದಲ್ಲಿ NDRF norms ಪ್ರಕಾರ ಕೊಟ್ಟರೆ ತುಂಬಾ ಕಡಿಮೆಯಾಗುತ್ತದೆ.

ಜೊತೆಗೆ ಮಹಾರಾಷ್ಟ್ರ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಪ್ಯಾಕೇಜ್ ಮಾಡಿದ್ದಾರೆ. ಅದರ ಪ್ರಕಾರ ಮಾಡೋಣ ಎಂದಾಗ ಮಾನ್ಯ ಮುಖ್ಯಮಂತ್ರಿಗಳು ಬೇಡ, ಅದಕ್ಕಿಂತ ಹೆಚ್ಚಿಗೆ ಕೊಡೋಣ ಎಂದು ಹೇಳಿ ನಾವು NDRF norms + ಮಹಾರಾಷ್ಟ್ರದಲ್ಲಿ ಕೊಟ್ಟಿರುವ ಪ್ಯಾಕೇಜ್‌ನಲ್ಲಿ 82.00 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ನಾವು ಅದಕ್ಕೆ 240 ಕೋಟಿ ರೂಪಾಯಿಗಳನ್ನು ಸೇರಿಸಿ 320 ಕೋಟಿ ರೂಪಾಯಿಗಳನ್ನು ಅವರಿಗೆ ಕೊಡಬೇಕೆಂದು ತೀರ್ಮಾನವಾಗಿದೆ. ಈಗ ಬಂದಿರುವ 82–00 ಕೋಟಿ ರೂಪಾಯಿಗಳನ್ನು ನಾವು ವಿತರಣೆ ಮಾಡಿದ್ದೇವೆ.ಇನ್ನುಳಿದ ಹಣವನ್ನು ನಾವು ಈಗಾಗಲೇ Finance Department ಗೆ ಹೇಳಿ ಒಪ್ಪಿಸಿದ್ದೇವೆ. ಹಣವನ್ನು ಸಹ ಕೊಡುತ್ತಿದ್ದೇವೆ. ಆಲಿಕಲ್ಲು ಮಳೆಯಿಂದ ಹಾನಿಯಾಗಿರುವವರಿಗೆ ಯಾವುದೇ ರೀತಿ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ. ಆ ಪ್ರಶ್ನೆ ಇಲ್ಲಿ ಇಲ್ಲ. ಇನ್ನು details ಬೇಕಾದರೆ ಕೊಡುತ್ತಿದ್ದೆವು. ಇಲ್ಲಿ ನೀವು ಕೇಳಿರುವುದಕ್ಕೆ ಉತ್ತರ ಕೊಡುತ್ತೇವೆ. ನೀವು ಕೂಡ ಅತಿವೃಷ್ಟಿ ವಿಷಯವಾಗಿ ತುಂಬಾ ಮಾತನಾಡಿದ್ದೀರಿ. ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಮಾತನಾಡಿದ್ದೀರಿ, ನಾನು ಅಷ್ಟೇ ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದೇನೆ. ನಿಮ್ಮ ಮೂಲ ಪ್ರಶ್ನೆ ಏನಿದೆ, ರಾಜ್ಯ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ (ಅತಿವೃಷ್ಟಿ) ಬಿಡುಗಡೆ ಮಾಡಿದ್ದ ಮೊತ್ತವೆಷ್ಟು? ಅದಕ್ಕೆ ಉತ್ತರದಲ್ಲಿ 2013ನೇ ಸಾಲಿನಲ್ಲಿ ಆಗಿರುವ ಅತಿವೃಷ್ಟಿ ಪರಿಹಾರಕ್ಕಾಗಿ ನಾವು ರಾಜ್ಯ ಸರ್ಕಾರದಿಂದ 53.88 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದೇವೆ. ಆದರೆ ಅತಿವೃಷ್ಟಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿರುವುದರಿಂದ ಸರ್ಕಾರ 2013–14ನೇ ಸಾಲಿನಲ್ಲಿ ಅತಿವೃಷ್ಟಿ ಪರಿಹಾರಕ್ಕಾಗಿ ಒಟ್ಟು 232.16 ಕೋಟಿ ರೂಪಾಯಿಗಳ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದೆ. ಇದರಲ್ಲಿ ಕೇಂದ್ರ ಸರ್ಕಾರದಿಂದ NDRF ಹಣ 76.53 ಕೋಟಿ ರೂಪಾಯಿಗಳು ಬಂದಿದೆ. ಕಳೆದ ವರ್ಷ ನಿಗದಿಯಾಗಿರುವುದು ಇವೆಲ್ಲಾ ಸೇರಿ 232 ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಗೆ ಅತಿವೃಷ್ಟಿ ಕಾರ್ಯಗಳಿಗೆ ಬಿಡುಗಡೆ ಮಾಡಿದ್ದೇವೆ. ಈ ಹಣ ಸಮರ್ಪಕವಾಗಿ ಬಳಕೆಯಾಗಿದೆಯೇ ಎಂಬುದು ನಿಮ್ಮ ಪ್ರಶ್ನೆ ಆಗಿದೆ. ಆ 232 ಕೋಟಿ ರೂಪಾಯಿಗಳು 33 ಜಿಲ್ಲೆಗಳಲ್ಲಿ ಹೇಗೆ ವಿತರಣೆ ಆಗಿದೆ ಎಂಬ ಪ್ರಶ್ನೆಯನ್ನು ಮಾಡಿದ್ದೀರಿ. ಆದರೆ ಜಿಲ್ಲಾವಾರು ಕೂಡ ನಾವು break up ಮಾಡಿ ಕೊಟ್ಟಿದ್ದೇನೆ. ಸುಮಾರು 19 ಜಿಲ್ಲೆಗಳಿಂದ Utilization Certificates ಬಂದಿವೆ. ಇನ್ನುಳಿದಂಥ ಜಿಲ್ಲೆಗಳಿಂದ UC ಗಳು ಬಂದಿಲ್ಲ. ನಿಮ್ಮ ಪ್ರಶ್ನೆ ನೋಡಿ. ನೀವು ಇಲ್ಲಿ ಪ್ರಶ್ನೆ ಮಾಡಬೇಕಾಗಿರುವುದು ಇದು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿದೆಯೇ? ಅಂದರೆ UC ಗಳು ಇನ್ನೂ 11 ಜಿಲ್ಲೆಗಳಿಂದ ಬಂದಿಲ್ಲ, ಅದಕ್ಕೆ ಕಾರಣಗಳೇನು ಎಂಬುದನ್ನು ತಿಳಿದುಕೊಂಡಿದ್ದೇವೆ. ಏಕೆ ಎಂದರೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿ Utilization Certificates ಬಂದಿಲ್ಲ, ಕೆಲವು ಕಡೆ ಇನ್ನು

progress ನಲ್ಲಿದೆ, ಕೆಲವೆಲ್ಲಾ Completion Certificate ಬೇಕಾಗಿವೆ. ಕೆಲವು ಕಡೆ ಎಲ್ಲಿ doubt ಬರುತ್ತದೋ ಅಲ್ಲಿ third party ಯಿಂದ inspection ಮಾಡಿಸಬೇಕಾಗಿದೆ. ಅದಕ್ಕೆ ನಾವು ಈಗಾಗಲೇ ಅವರಿಗೆ ಹೇಳಿದ್ದೇವೆ. ಇದನ್ನೆಲ್ಲಾ ಅನುಸರಿಸಿ ಅವರಿಗೆ ಆದೇಶ ಕೊಟ್ಟಿದ್ದೇವೆ. ಇನ್ನು 11 ಜಿಲ್ಲೆಗಳಲ್ಲಿ ಈ ಹಣವನ್ನೇನು ಬಿಡುಗಡೆ ಮಾಡಿದ್ದೇವೆ. ಅಷ್ಟೂ ಹಣವನ್ನು ಉಪಯೋಗಿಸಿ ನಮಗೆ U.C ಯನ್ನು ಕೊಡಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ನಿಮ್ಮ ಪ್ರಶ್ನೆ ಇಷ್ಟು, ಅದಕ್ಕೆ ಉತ್ತರವನ್ನು ಕೂಡ ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : 19 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ Utilization Certificates ಬಂದಿಲ್ಲ. ಆಲಿಕಲ್ಲು ಮಳೆಯಿಂದ ಅತಿವೃಷ್ಟಿಯಾಗಿ ಏನು ಹಾನಿಯಾಗಿದೆ ಅದರಿಂದ ರೈತರಿಗೇನು ತೊಂದರೆಯಾಗಿದೆ ಅದಕ್ಕೆ ತಾವು 320.00 ಕೋಟಿ ರಾಜ್ಯ ಸರ್ಕಾರದ ಹಣವನ್ನು ಸೇರಿಸಿದೆ, ಆದರೆ ಆ ಹಣವನ್ನು ನೀವು ಇದುವರೆಗೆ ಬಿಡುಗಡೆಯಾಗಿಲ್ಲ. ಹಣಕಾಸು ಇಲಾಖೆಯಲ್ಲಿ proposal ಇದೆ, ನೀವು statement ಕೊಟ್ಟಿದ್ದೀರಿ, ಎಲ್ಲಾ ಇದೆ, ನಷ್ಟವಾಗಿರುವ ರೈತರಿಗೆ ಇನ್ನೂ ಹೋಗಿ ಮುಟ್ಟಿಲ್ಲ. ಚುನಾವಣೆ ಬಂದಾಗ ಚುನಾವಣೆ ನೀತಿ ಸಂಹಿತೆ ಎಂದು ಹೇಳಿದಿರಿ, ಚುನಾವಣೆ ಮುಗಿದ ಮೇಲೆಯೂ ಇದುವರೆಗೆ ಹಣವನ್ನು ತಾವು ಬಿಡುಗಡೆ ಮಾಡುವುದಕ್ಕೆ ತಯಾರಿಲ್ಲ. ಅಂದರೆ immediately ನೀವು decision ತೆಗೆದುಕೊಳ್ಳುತ್ತಿಲ್ಲ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಪ್ರಶ್ನೆಯೇ ಇಲ್ಲ. ಬಿಡುಗಡೆ ಮಾಡುತ್ತೇವೆ.

ರೈತರಿಗೆ ಅದನ್ನು ತಲುಪಿಸುತ್ತೇವೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್ : ಬೇಗ ಬಿಡುಗಡೆ ಮಾಡಿ ಬಿಡಿ. ಕಷ್ಟವಾದವರಿಗೆ ತಲುಪಿಸಿಬಿಡಿ.

(ಗೊಂದಲ)

ಅಧ್ಯಕ್ಷರು : ಆಯಿತು. Next ವಿಷಯ ತೆಗೆದುಕೊಳ್ಳೋಣ. Time ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಒಂದಕ್ಕೆ ನಾಲ್ಕು ಪಟ್ಟು ಪರಿಹಾರ ಏನು ಕೊಡುತ್ತೇವೆಂದು ಹೇಳಿದ್ದಾರೆ ಅದು ಹಣಕಾಸಿನ ಇಲಾಖೆಯಲ್ಲಿದೆ ಎಂದು ಹೇಳಿದರು. ನಮ್ಮ ನಾಯಕರು ಅದನ್ನು ಪ್ರಸ್ತಾಪ ಮಾಡಿದ್ದಾರೆ. ನೀವು ಎರಡು ವಿಷಯಕ್ಕೆ ಸಂಬಂಧಿಸಿದಂತೆ ಪರಿಹಾರ ಕೊಡಬೇಕು. ನೀವು ಮಾನ್ಯ ಹಿರಿಯ ಸಚಿವರಿದ್ದೀರಿ. ಒಂದು ಏನೆಂದರೆ, ಡಿ.ಸಿ.ಗಳ ಹತ್ತಿರ U.C.ಯನ್ನು ತರಿಸಲೇಬೇಕು. ಆ ಯು.ಸಿ. 2012–13ನೇ ಸಾಲಿನದು. 2013–14 ಆಗಿದೆ. ಈಗ 2014–15ನೇ ಸಾಲಿನದು ನಡೆಯುತ್ತಿವೆ. ಹಾಗಾಗಿ ಆ ಯು.ಸಿ.ಗಳನ್ನು ತರಿಸಬೇಕು. ಇಲ್ಲದಿದ್ದರೆ ಅಲ್ಲಿ payment ಆಗದೇ ಎಲ್ಲಾ ರೀತಿಯ ಸಮಸ್ಯೆಗಳಾಗಿ ಕುಳಿತಿದೆ. ಅವರು U.C. ಕೊಡದ ಹೊರತು, ನಮಗೆ Central

Government ಹತ್ತಿರವಾಗಲಿ ಅಥವಾ Finance Department ಹತ್ತಿರವಾಗಲಿ claim ಮಾಡುವುದಕ್ಕೆ ಆಗುವುದಿಲ್ಲ. ಇಲ್ಲದಿದ್ದರೆ ನಿಮ್ಮ ಹತ್ತಿರ ಇಂತಿಷ್ಟು ದುಡ್ಡಿದೆ ಎಂದು ಹೇಳುತ್ತಾರೆ ಆಗ ನಾವು ಹೌದಲ್ಲವೇ ಎಂದು ಎಲ್ಲೋ ದುಡ್ಡಿದೆ ಎಂದು ತಿಳಿದು ಕುಳಿತುಕೊಳ್ಳುತ್ತೇವೆ. Actually ದುಡ್ಡಿಲ್ಲ. ಅಲ್ಲಿ ಲೆಕ್ಕದಲ್ಲಿ ಖರ್ಚು ತೋರಿಸದೇ ಇರುವುದರಿಂದ ದುಡ್ಡಿದೆ ಎಂದು ಇವರು ತೋರಿಸುತ್ತಾರೆ. ಹಾಗಾಗಿ ಸಮಸ್ಯೆಯಾಗುತ್ತದೆ. ತಕ್ಷಣವೇ Finance Department ನಿಂದ ಬಿಡುಗಡೆ ಮಾಡುವುದು ಒಂದು. ಎರಡನೆಯದು ನೀವು ಆ U.C.ಯನ್ನು ಡಿ.ಸಿ.ಗಳಿಗೆ time-bound ಮಾಡಿ, ಅದು ಏನೇನು inspection ಆಗಬೇಕು ಅದನ್ನು ಮಾಡಿಸಿ ಕಳುಹಿಸುವ ಹಾಗೆ ಒಂದು direction ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಖಂಡಿತ ಕೊಡುತ್ತೇವೆ.

ಶ್ರೀ ಎನ್.ಹೆಚ್.ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ರೂ.232 ಕೋಟಿಯಲ್ಲಿ, 16 ಕೋಟಿ release ಮಾಡಿದ್ದಾರೆ. ಅದನ್ನು ಜಿಲ್ಲಾಧಿಕಾರಿಗಳು PD account ನಲ್ಲಿ ಇಟ್ಟುಕೊಂಡು ಕುಳಿತಿದ್ದಾರೆ. ಯಾವುದೇ ರೀತಿಯ ಖರ್ಚು ಮಾಡಬೇಕೆಂದರೆ ಮಾಡುತ್ತಿಲ್ಲ.

ಅಧ್ಯಕ್ಷರು : Interest ಬರಲಿ ಎಂದು ಇಟ್ಟುಕೊಂಡಿದ್ದಾರೆ.

ಶ್ರೀ ಎನ್.ಹೆಚ್.ಕೋನರೆಡ್ಡಿ : ಯಾವುದೇ ಡಿ.ಸಿ.ಗಳು ಅದನ್ನು implement ಮಾಡುತ್ತಿಲ್ಲ. ಆ CRF flood amount ನಲ್ಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಕೊಡುವ ಹಾಗಿಲ್ಲ.

ಅಧ್ಯಕ್ಷರು: ಒಂದು ಕೆಲಸ ಮಾಡಿ. ಯಾವುದಾದರೂ ಒಬ್ಬ ಡಿ.ಸಿ. ಇಂತಹದ್ದು ಮಾಡಿದ್ದಾರೆ ಎಂದು ಹೇಳಿದರೆ ಅದಕ್ಕೆ specific ಆಗಿ reply ಕೊಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆ ರೀತಿ 19 ಡಿ.ಸಿ.ಗಳು ಮಾಡಿದ್ದಾರೆ. 19 ಡಿ.ಸಿ.ಗಳು ಇನ್ನೂ ವರದಿ ಕೊಡಲಿಲ್ಲ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಯಾಕೆ ಮಾಡಿಲ್ಲವೆನ್ನುವುದನ್ನು ಕೂಡ ತಮಗೆ ಹೇಳಿದ್ದೇನೆ. Utilization progress ನಲ್ಲಿವೆ. ಎಲ್ಲಾದಕ್ಕೂ ಕೂಡ completion certificate ಬೇಕು. ಕೆಲವು ಕಡೆ ಎಲ್ಲಿ doubt ಇದೆ ಅಲ್ಲಿ third party inspection ಮಾಡಿ ಕಳುಹಿಸುತ್ತೇವೆಂದು ಹೇಳಿದ್ದಾರೆ. ಅವರಿಗೆ ಆದಷ್ಟು ಬೇಗ ಮಾಡಿ ಎಂದು ಹೇಳಿದ್ದೇವೆ.

ಅಧ್ಯಕ್ಷರು : ಮಂತ್ರಿಗಳೇ, ಒಂದು ಮಾತನ್ನು ಕೇಳಿ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಪಾರದರ್ಶಕ ಆಡಳಿತ ಎಂದು ಇಲ್ಲಿಯೇ ಹೇಳಿದ್ದಾರೆ. ಆದ್ದರಿಂದ ಡಿ.ಸಿ.ಗಳಿಗೆ ಆ injection ಸ್ವಲ್ಪ ಕೊಡಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 07 (57)

ಅಧ್ಯಕ್ಷರು : ಸಮಯ ಕೇಳಿದ್ದಾರೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಇದು ಹೋದ ಅಧಿವೇಶನದಲ್ಲಿ ಪ್ರಶ್ನೆ ಕೇಳಿದಂತಹದ್ದು.

ಅಧ್ಯಕ್ಷರು : ಈ ಅವಧಿಯಲ್ಲಿಯೇ ಉತ್ತರ ಕೊಡಿಸುತ್ತೇನೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ : ನನಗೆ ನಿನ್ನೆ ಬಂದಿದೆ. ಹೋದ ಸಲದ ಅಸೆಂಬ್ಲಿಯದು ಉತ್ತರ ನಿನ್ನೆ ಬಂದಿದೆ.

ಅಧ್ಯಕ್ಷರು : ಈ ಸಲವೇ ಉತ್ತರ ಕೊಡಿಸಿಬಿಡುತ್ತೇನೆ. Time bond ಹಾಕಿಕೊಳ್ಳಿ. 15 ದಿನಗಳ ಕಾಲಾವಕಾಶ ಕೇಳಿದ್ದಾರೆ. ನಿಮಗೆ ಈ ಅವಧಿಯಲ್ಲಿಯೇ ಕೊಡಿಸಿಬಿಡುತ್ತೇನೆ.

ಮಗುವಿಗೊಂದು ಮರ ಶಾಲೆಗೊಂದು ವನ ಯೋಜನೆ ಅನುಷ್ಠಾನ

08(100) ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ):– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಮಗುವಿಗೊಂದು ಮರ ಶಾಲೆಗೊಂದು ವನ ಯೋಜನೆಯು ಜಾರಿಯಲ್ಲಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ ;

(ಆ) ಈ ಯೋಜನೆಯು ಜಾರಿಗೊಂಡ ದಿನದಿಂದ ಈ ವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಎಷ್ಟು ಸಸಿಗಳನ್ನು ಶಾಲೆಗಳಲ್ಲಿ ನೆಡಲಾಗಿದೆ ; (ವರ್ಷವಾರು ಅನುದಾನ ಮತ್ತು ಸಸಿಗಳ ವಿವರಗಳನ್ನು ನೀಡುವುದು)

(ಇ) ಈ ಯೋಜನೆಯು ಯಶಸ್ವಿ ಯಾಗಿದೆಯೇ ; ಹಾಗಿದ್ದಲ್ಲಿ, ಯಾವ ರೀತಿ ಯಶಸ್ವಿಯಾಗಿದೆ ; (ವಿವರ ನೀಡುವುದು)

(ಈ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

(ಉ) ಈ ಯೋಜನೆಯ ರೂಪುರೇಷೆಗಳು ಹಾಗೂ ಉದ್ದೇಶಗಳು ಏನು ; ಈ ಯೋಜನೆಯನ್ವಯ ಶಾಲೆಗೊಂದು ವನ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) ಹೌದು. ----------

ಈ ಯೋಜನೆಯನ್ನು ರಾಜ್ಯದಲ್ಲಿ 2011–12ನೇ ಸಾಲಿನಿಂದ ಜಾರಿಗೊಳಿಸಲಾಗಿದೆ.